

ಗಾಢವರ್ಣಗಳನ್ನು ಮನೆಯಲ್ಲಾಗಲೀ, ಧ್ಯಾನಮಂದಿರಗಳಲ್ಲಿ ಸಾಮಾನ್ಯವಾಗಿ ಬಳಸುವುದಿಲ್ಲ. ಏಕೆಂದರೆ, ಅದು ಆಕರ್ಷಿಸುತ್ತದೆಯೇ ಹೊರತು, ಪ್ರಶಾಂತ ಎನ್ನುವ ಭಾವನೆಯನ್ನು ಹುಟ್ಟಿಸುವುದಿಲ್ಲ.

# ಬಣ್ಣಗಳ ಸುಂದರ ಸಂಕಲನ

■ ರಾಮ್‌ಕದಮ್

ಬಣ್ಣಗಳೇ ಹಾಗೆ, ಚಿತ್ತಾಕರ್ಷಕ. ಕೆಲ ಬಣ್ಣಗಳಂತೂ ಮೋಡಿ ಮಾಡುತ್ತವೆ. ಒಂದು ಚಿತ್ರದಲ್ಲಿ ಅಗಣಿತ ಬಣ್ಣಗಳನ್ನು ಸಂಯೋಜಿಸುತ್ತಿದ್ದಾರೆ. ಕುಂಚದಿಂದ ಬಳಿಯುವ ನಾಲ್ಕೈದು ಬಣ್ಣಗಳಷ್ಟೇ ಕಣ್ಣಿಗೆ ಕಾಣಿಸುತ್ತವೆ. ತಂತ್ರಜ್ಞಾನ ಮುಂದುವರೆದಂತೆ ಬಣ್ಣಗಳ ಲೋಕವೂ ತನ್ನ ಸ್ವರೂಪ ಮತ್ತು ಸಂಕೇತಗಳನ್ನು ಬದಲಿಸುತ್ತ ಮುನ್ನಡೆಯುತ್ತಿದೆ. ವಿನ್ಯಾಸದ ಸವಾಲುಗಳು ಹೆಚ್ಚುತ್ತಿವೆ. ವರ್ಣವಿನ್ಯಾಸವೆಂಬ ಮಾಯಾಲೋಕ ಎಲ್ಲ ಕ್ಷೇತ್ರದ ಚಹರೆಯಾಗಿದೆ.

ರೋಚಕವಾಗಿರುವ ಈ ವರ್ಣಗಳ ಮೇಲೆ ಹಿಡಿತ ಸಾಧಿಸಿ, ಆಕರ್ಷಕವಾಗಿ ಸಂಯೋಜಿಸುವ ಸೂತ್ರವೇನೆಂಬುದು ಹೆಚ್ಚಿನ ಜನರಿಗೆ ತಿಳಿಯುವ ಕುತೂಹಲ ಇರುತ್ತದೆ. ಒಬ್ಬ ವಿನ್ಯಾಸಕ ಎಂತಹ ಕೌಶಲ್ಯವನ್ನು ಬಳಸುತ್ತಾನೆ ಎನ್ನುವ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ಮಾಡಲಾಗಿದೆ.

ಒಳಾಂಗಣ ವಿನ್ಯಾಸ ಹಲವು ಸಂಗತಿಗಳನ್ನು ಒಳಗೊಂಡಿರುವ ಸಂಕೀರ್ಣ ಕಲೆ. ಅದರಲ್ಲಿ, ಬಣ್ಣಗಳ ಸಂಯೋಜನೆ ತಾಂತ್ರಿಕ ಕೌಶಲ್ಯ. ಬಣ್ಣ ಎನ್ನುವುದು ಅವರವರ ಅಭಿರುಚಿಗೆ ತಕ್ಕಂತೆ ಭಿನ್ನವಾಗಿರುತ್ತದೆ. ಮನೆಯನ್ನು ಶೃಂಗರಿಸುವ ಬಣ್ಣ ಆ ಕುಟುಂಬದ ಸದಸ್ಯರ ಇಷ್ಟದಂತೆ ಅಭಿರುಚಿಗೆ ತಕ್ಕಂತಿರುತ್ತದೆ. ಸಾಮಾನ್ಯವಾಗಿ ತಿಳಿಬಣ್ಣಗಳನ್ನು ವಾಸದ ಮನೆಯ ಒಳಾಂಗಣಕ್ಕೆ ಆಯ್ಕೆ ಮಾಡಿಕೊಂಡರೆ, ಗಾಢಬಣ್ಣಗಳನ್ನು ವಾಣಿಜ್ಯ ಕಟ್ಟಡಗಳಿಗೆ ಬಳಸುವುದು ಹೆಚ್ಚು. ಇಂತಹ ಬಣ್ಣಗಳನ್ನು ದೀರ್ಘಕಾಲ ನೋಡಲು ಕೆಲವರಿಗೆ ಇಷ್ಟ ಆಗದೇ ಇರಬಹುದು. ಹೀಗಿದ್ದರೂ ವಾಣಿಜ್ಯ ಸ್ಥಳಗಳಲ್ಲಿ ಗಾಢಬಣ್ಣಗಳನ್ನೇ ಪ್ರಮುಖವಾಗಿ ಬಳಸುತ್ತಾರೆ.

ಒಬ್ಬ ಉತ್ತಮ ವರ್ಣವಿನ್ಯಾಸಕಾರ, ವಸ್ತುಗಳ ಪ್ರದರ್ಶನ ಅಥವಾ ಮಾರಾಟದ ಸ್ಥಳ ಸಂಯೋಜಿಸುವ ಉದ್ದೇಶವೇನೆಂದರೆ, ಅವು ತಕ್ಷಣ ಆಕರ್ಷಿಸುವ ಗುಣವನ್ನು ಹೊಂದಿರುತ್ತವೆ. ಅಲ್ಲದೇ ನೋಡುವವರ ಗಮನ ಅಕ್ಕಪಕ್ಕ ಹರಿಯದಂತೆ ವಸ್ತುವಿನಲ್ಲಿಯೇ ಕೇಂದ್ರೀಕರಿಸುವಂತೆ ಮಾಡುತ್ತದೆ. ಅರೆ! ಸುತ್ತಲೂ ಗಾಢವಾದ ಬಣ್ಣವೇ ಆವರಿಸಿದ್ದರೆ ವಸ್ತು ಕಾಣುವುದಾದರೂ ಹೇಗೆ? ಎಂಬ ಪ್ರಶ್ನೆ ಕಾಡಬಹುದು. ವಸ್ತುವಿರುವ ಸ್ಥಳವನ್ನು ಸ್ಪಾಟ್‌ಲೈಟ್ ಮೂಲಕ ಗ್ರಾಹಕನಿಗೆ ವಸ್ತುವನ್ನೇ ಎದ್ದು ಕಾಣುವಂತೆ ವ್ಯವಸ್ಥೆ ಮಾಡಿರುತ್ತಾರೆ.

ಗಾಢವರ್ಣಗಳನ್ನು ಮನೆಯಲ್ಲಾಗಲೀ, ಹೋಟೆಲ್, ಅತಿಥಿ ಗೃಹ, ಧ್ಯಾನಮಂದಿರಗಳಲ್ಲಿ ಸಾಮಾನ್ಯವಾಗಿ ಬಳಸುವುದಿಲ್ಲ. ಏಕೆಂದರೆ, ಅದು ಆಕರ್ಷಿಸುತ್ತದೆಯೇ ಹೊರತು, ಪ್ರಶಾಂತ ಎನ್ನುವ ಭಾವನೆಯನ್ನು ಹುಟ್ಟಿಸುವುದಿಲ್ಲ. ವಾತಾವರಣವನ್ನು ಸೃಷ್ಟಿಸುವುದಿಲ್ಲ. ಹೀಗಾಗಿ, ಹೆಚ್ಚು ಹೊತ್ತು ಕಾಲಕಳೆಯುವ ಸ್ಥಳಗಳಲ್ಲಿ ಮನಸ್ಸಿಗೆ ಮುದನೀಡುವ ತಿಳಿಬಣ್ಣವನ್ನೇ ಬಳಸುತ್ತಾರೆ.

ಮನೆಯ ಲಿವಿಂಗ್ ಕೋಣೆಯೊಂದರ ಚಿತ್ರವನ್ನು ಇಲ್ಲಿ ನೋಡಬಹುದು. ಇಲ್ಲಿ ಅಂತಹ ವಿಶೇಷವಾದ ಯಾವ ವಸ್ತುಗಳೂ ಇಲ್ಲ. ಆದರೂ ಇಲ್ಲಿಯ ರಚನೆ ಆಕರ್ಷಕವಾಗಿದೆ. ಒಳಾಂಗಣ ವಿನ್ಯಾಸಕಾರ ಯಾವ ತಂತ್ರವನ್ನು ಬಳಸಿರಬಹುದು? ವರ್ಣವಿನ್ಯಾಸ ಮಾಡುವ ಸಂದರ್ಭದಲ್ಲಿ, ಬದಲಾವಣೆ ಮಾಡಲಾಗದ, ಸ್ಥಿರವಾದ ವಸ್ತು ಯಾವುದಿದೆ ಎಂಬುದನ್ನು ಮೊದಲು ಕಂಡುಕೊಳ್ಳಬೇಕು. ಈ ಚಿತ್ರವನ್ನು ಗಮನಿಸಿದರೆ, ನೆಲ ಇಲ್ಲಿಯ ಬದಲಾಯಿಸಲಾಗದ ಸ್ಥಿರ ಅಂಶ. ಕೆಲವೆಡೆ ಅಗತ್ಯವೆನಿಸಿದರೆ ನೆಲವನ್ನೂ ಬದಲಾಯಿಸುವ ಅವಕಾಶವೂ ಇರುತ್ತದೆ. ಆದರೆ, ಈ ಕೋಣೆಯಲ್ಲಿ ಗುಣಮಟ್ಟದ ವುಡನ್‌ಫ್ಲೋರ್ ಬಳಸಿರುವುದರಿಂದ ಇದು ಬದಲಾಯಿಸಲಾಗದ ಸ್ಥಿರವಸ್ತು ಎಂದೇ ಪರಿಗಣಿಸಬೇಕು. ಪೀಠೋಪಕರಣ, ಪರದೆ, ಕಿಟಕಿ, ಬಾಗಿಲು, ನೆಲಹಾಸು (ಫ್ಲೋರ್‌ಮ್ಯಾಟ್), ಗೋಡೆಯ ಮೇಲಿನ ಕಲಾಕೃತಿಗಳು, ಗೋಡೆಯ ಬಣ್ಣ ಎಲ್ಲವನ್ನೂ ನೆಲದ ಬಣ್ಣಕ್ಕೆ ಹೊಂದುವಂತೆ ಅದರದೇ ಛಾಯೆಯ ತಿಳಿ ಬಣ್ಣಗಳಿಂದ ಸಂಯೋಜಿಸಬೇಕಾಗಿರುತ್ತದೆ. ಅಷ್ಟೇ ಅಲ್ಲ, ಮಾರುಕಟ್ಟೆಯಿಂದ ಯಾವುದೇ ಆಲಂಕಾರಿಕ ವಸ್ತು ಖರೀದಿಸುವಾಗಲೂ ಅದು ಇಲ್ಲಿಯ ವರ್ಣವಿನ್ಯಾಸಕ್ಕೆ ಹೊಂದುತ್ತದೆಯೇ ಎಂದು ವಿಮರ್ಶಿಸಿ ನೋಡಲು ಮರೆಯಬಾರದು. ಈ ಸೂತ್ರದ ಆಧಾರದಲ್ಲಿ ಈಗ ಮತ್ತೊಮ್ಮೆ ಈ ಕೋಣೆಯ ವಸ್ತುಗಳು ಮತ್ತು ಅಲ್ಲಿಯ ವರ್ಣವಿನ್ಯಾಸಗಳನ್ನು ಗಮನಿಸಿ ನೋಡಿ; ಅದ್ಭುತವಾದ ಅದರ ಗುಟ್ಟು ತೆರೆದುಕೊಳ್ಳುತ್ತದೆ. ಹೀಗೆ, ಹಿತಾನುಭವ ನೀಡುವ ವರ್ಣವಿನ್ಯಾಸಗಳಿಂದ, ನಿಮ್ಮ ಮನೆಯ ಅಂದಚಂದವನ್ನು ಹೆಚ್ಚಿಸಬಹುದು. ■